# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೋರಮಂಗಲ ಉಪ-ವಿಭಾಗದ ವಾರ್ಡ್ ಸಂಖ್ಯೆ-151 (ಕೋರಮಂಗಲ) ಬಿ.ಬಿ.ಎಂ.ಪಿ ಉದ್ಯಾನವನ, 12ನೇ ಮುಖ್ಯರಸ್ತೆ, 3ನೇ ಬ್ಲಾಕ್ ಕೋರಮಂಗಲದಲ್ಲಿ ದಿನಾಂಕ: 21.11.2020 ರಂದು ನವೆಂಬರ್-2020 ರ ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಪಿ. ವನರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೋರಮಂಗಲ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 151ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ. ಉದ್ಯಾನವನ, 12ನೇ ಮುಖ್ಯರಸ್ತೆ, 3ನೇ ಬ್ಲಾಕ್ ಕೋರಮಂಗಲ, ಪೋಸ್ಟ್ ಆಫೀಸ್ ಹತ್ತಿರ, ಬೆಂಗಳೂರು ಇಲ್ಲಿ ದಿನಾಂಕ:21.11.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರೊಂದಿಗೆ ನಡೆದ ಸಭೆಯ ನಡವಳಿಗಳು:-

**ಹಾಜರಿದ್ದ ಸದಸ್ಯರುಗಳು:**

1. ಶ್ರೀ ಎಂ. ಚಂದ್ರಪ್ಪ (ಮಾಜಿ ಪಾಲಿಕೆ ಸದಸ್ಯರು)
2. ಶ್ರೀ ವಿಶ್ವನಾಥ್ ಕಶ್ಯಪ್
3. ಶ್ರೀ ಡಾ॥ ಕೆ. ಉಮೇಶ್ವರ
4. ಶ್ರೀ ಜಯರಾಮು
5. ಶ್ರೀಮತಿ ನೀರಜಾಶೆಟ್ಟಿ
6. ಶ್ರೀ ಎಂ. ಶ್ರೀನಿವಾಸ್
7. ಶ್ರೀ ಎಂ. ಸಂಪಂಗಿರಾಜು

**ಹಾಜರಿದ್ದ ಅಧಿಕಾರಿಗಳ ವಿವರಗಳು**

1. ಶ್ರೀ ಪಿ. ವನರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೋರಮಂಗಲ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
2. ಶ್ರೀ ಚಂದ್ರಶೇಖರ್ .ಪಿ., ಸದಸ್ಯ ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ವಾರ್ಡ್-151 ಕೋರಮಂಗಲ
3. ಶ್ರೀ ಎಂ.ಡಿ. ಶದಾಬ್ ಹೈದರ್, ಹಿರಿಯ ಆರೋಗ್ಯ ನೀರಿಕ್ಷಕರು, ಬಿಬಿಎಂಪಿ
4. ಶ್ರೀ ವಿನಾಯಕ ನಾಯಕ್, ಸಹಯಕ ಅಭಿಯಂತರರು, ಯೋಜನೆ
5. ಶ್ರೀ ಮೋಹನ್ ಕುಮಾರ್ .ಜಿ, ಪಿ.ಎಸ್.ಐ, ಆಡುಗೋಡಿ ಸಂಚಾರ ಪೋಲಿಸ್ ಠಾಣೆ
6. ಶ್ರೀ ದೇವರಾಜು, ಎ.ಎಸ್.ಐ., ಮಡಿವಾಳ ಪೋಲಿಸ್ ಠಾಣೆ
7. ಶ್ರೀ ಪ್ರಸಾದ್ ಎನ್.ಎಸ್, ಕಿರಿಯ ಆರೋಗ್ಯ ಪರಿವೀಕ್ಷಕರು, ಕೋರಮಂಗಲ
8. ಶ್ರೀ ಉಪೇಂದ್ರ ಹೆಚ್.ವಿ, ಬಿ.ಬಿ.ಎಂ.ಪಿ (ಮಾರ್ಷಲ್)

* * * * * *

ಶ್ರೀ ಪಿ. ವನರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೋರಮಂಗಲ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 151 ರವರು ಮೊದಲಿಗೆ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳನ್ನು ಮತ್ತು ಇಲಾಖಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.



Scanned with CamScanner

ವಾರ್ಡ್ ಸಮಿತಿ ಸಭೆಯಲ್ಲಿ ಗೈರುಹಾಜರಾಗಿರುವ ಸದಸ್ಯರು ಮತ್ತು ಇಲಾಖೆ ಅಧಿಕಾರಿಗಳು ಮುಂದಿನ ವಾರ್ಡ್ ಸಭೆಯಲ್ಲಿ ಕಡ್ಡಾಯವಾಗಿ ಹಾಜರಾಗಲು ಸೂಚಿಸಬೇಕೆಂದು ತಿಳಿಸಿದರು.

ಎಂ.ಡಿ. ಶದಾಬ್ ಹೈದರ್, ಹಿರಿಯ ಆರೋಗ್ಯ ಪರಿವೀಕ್ಷಕರು ರವರ ಮಾತನಾಡಿ, ಕೋವಿಡ್–19 ರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹಾಗೂ ಜಾಗೃತಿಯ ಬಗ್ಗೆ ಸಭೆಗೆ ತಿಳಿಸಿದರು.

80 ಅಡಿರಸ್ತೆಯಲ್ಲಿರುವ ಜಿಮ್ಮಿ ಬಾರ್ ಹತ್ತಿರ ವಾಹನಗಳ ವೇಗಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ನಿರ್ಮಿಸಿರುವ ರಸ್ತೆ ಉಬ್ಬುಗಳ ಮಟ್ಟವು ಎತ್ತರವಾಗಿದ್ದು, ವಾಹನಗಳ ಸುಗಮ ಸಂಚಾರಕ್ಕೆ ತೊಂದರೆ ಆಗುತ್ತಿರುತ್ತದೆ. ಆದುದರಿಂದ ರಸ್ತೆ ಉಬ್ಬುಗಳ ಮಟ್ಟವನ್ನು ಕಡಿಮೆ ಮಾಡಬೇಕೆಂದು ತಿಳಿಸಿದರು.

ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಉಳಿಯುವ ಡೆಬ್ರಿಸ್‌ಗಳನ್ನು ಖಾಸಗೀ ವಾಹನಗಳಲ್ಲಿ ಸರಿಯಾಗಿ ಸಾಗಿಸದೆ, ಸಾಗಿಸುವ ರಸ್ತೆಗಳಲ್ಲಿ ಡೆಬ್ರಿಸ್‌ಗಳು ಚೆಲ್ಲುತ್ತಿರುವ ಕಾರಣ ಕಟ್ಟಡದ ಡೆಬ್ರಿಸ್‌ಗಳನ್ನು ಬಿ.ಬಿ.ಎಂ.ಪಿಯ ವಶಕ್ಕೆ ಪಡೆದು ಸಾಗಿಸಬೇಕೆಂದು ತಿಳಿಸಿದರು.

ಶ್ರೀಮತಿ ನೀರಜಾಶೆಟ್ಟಿ ರವರು ಮಾತನಾಡಿ, ಸೋನಿ ವರ್ಲ್ಡ್ ಜಂಕ್ಷನ್‌ನಿಂದ ಬೆಳ್ಳಂದೂರು ಕೆರೆವರೆಗೂ ಕೈಗೊಂಡಿರುವ ಚರಂಡಿ ಕಾಮಗಾರಿಗಳ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ತಿಳಿಸಿದರು.

ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ವೀರ ಯೋಧರ ಉದ್ಯಾನವನದಲ್ಲಿ ಬೀದಿ ದೀಪಗಳು ಹದಗೆಟ್ಟಿರುತ್ತವೆ. ಆದುದರಿಂದ ಹದಗೆಟ್ಟಿರುವ ಬೀದಿ ದೀಪಗಳನ್ನು ಸರಿಪಡಿಸಬೇಕೆಂದು ತಿಳಿಸಿದರು.

ಶ್ರೀ ಶ್ರೀನಿವಾಸ ರವರು ಮಾತನಾಡಿ 8ನೇ ಮುಖ್ಯರಸ್ತೆ, ಕೋರಮಂಗಲ ಗ್ರಾಮ ಮತ್ತು ಗಣೇಶ ಉದ್ಯಾನವನಗಳಲ್ಲಿ ಬೀದಿ ದೀಪಗಳಿಗೆ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಆದುದರಿಂದ ಬೀದಿ ದೀಪಗಳನ್ನು ಸರಪಡಿಸಬೇಕೆಂದು ತಿಳಿಸಿದರು.

ಶ್ರೀಮತಿ ನೀರಜಾಶೆಟ್ಟಿ ರವರು ಮಾತನಾಡಿ, ಬೆಥನಿ ಶಾಲೆ ಬಳಿ ಇರುವ ರಸ್ತೆ ಉಬ್ಬನ್ನು ತೆರವುಗೊಳಿಸಬೇಕೆಂದು ತಿಳಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಂಚಾರ ಪೋಲಿಸ್ ಠಾಣೆಯ ಪಿ.ಎಸ್.ಐ. ಶ್ರೀ ಮೋಹನ್ ಕುಮಾರ್ .ಜಿ ರವರು ಸದರಿ ಸ್ಥಳದಲ್ಲಿ ಶಾಲೆಯು ಇರುವುದರಿಂದ ರಸ್ತೆ ಉಬ್ಬು ಅತ್ಯಗತ್ಯವೆಂದು ತಿಳಿಸಿದರು.

ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ಕೆನರಾ ಬ್ಯಾಂಕ್ ರಸ್ತೆಯು ಏಕಮುಖ ಸಂಚಾರವಾಗಿದ್ದು, ಸಾರ್ವಜನಿಕರು ರಸ್ತೆ ನಿಯಮ ಪಾಲಿಸದೆ ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧವಾಗಿ ರಸ್ತೆಗಳಲ್ಲಿ ವಾಹನಗಳನ್ನು ಚಾಲನೆ ಮಾಡುತ್ತಿರುತ್ತಾರೆ. ಸಂಚಾರ ಪೋಲಿಸ್ ರವರು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ವಾರ್ಡ್‌ನಲ್ಲಿ ನಡೆಯುತ್ತಿರುವ ಕಾಮಗಾರಿಗಳ ಸ್ಥಳದಲ್ಲಿ ಕಾಮಗಾರಿಯ ಬಗ್ಗೆ ವಿವರವುಳ್ಳ ನಾಮಫಲಕಗಳನ್ನು ಅಳವಡಿಸುವಂತೆ ಕ್ರಮಕೈಗೊಳ್ಳಲು ತಿಳಿಸಿದರು.

8ನೇ ಮುಖ್ಯರಸ್ತೆಯಲ್ಲಿರುವ ವಾಣಿಜ್ಯ ಅಂಗಡಿಗಳ ಮಾಲೀಕರುಗಳು ಫುಟ್‌ಪಾತ್‌ಗಳನ್ನು ಅತಿಕ್ರಮಿಸಿಕೊಂಡು ವ್ಯಾಪಾರಗಳನ್ನು ಮಾಡುತ್ತಿರುತ್ತಾರೆ. ಇದರಿಂದಾಗಿ ಪಾದಚಾರಿ ಮಾರ್ಗದಲ್ಲಿ ಸಾರ್ವಜನಿಕರು ಸಂಚರಿಸಲು ತೊಂದರೆಯಾಗುತ್ತಿರುತ್ತದೆ.



Scanned with CamScanner

ಶ್ರೀಮತಿ ನೀರಜಾಶೆಟ್ಟಿ ರವರು ಮಾತನಾಡಿ, 100 ಅಡಿರಸ್ತೆಯಲ್ಲಿ ಫ್ಲೈಓವರ್ ಕಾಮಗಾರಿಯು ನಿಧಾನಗತಿಯಲ್ಲಿ ನಡೆಯುತ್ತಿದ್ದು, ಆದಷ್ಟು ಬೇಗ ಪೂರ್ಣಗೊಳಿಸಲು ಕ್ರಮಕೈಗೊಳ್ಳುವಂತೆ ಸಭೆಗೆ ತಿಳಿಸಿದರು. ಈ ವಿಷಯಕ್ಕೆ ಸಭೆಯಲ್ಲಿ ಹಾಜರಿದ್ದ ಯೋಜನೆ ವಿಭಾಗದ ಸಹಾಯಕ ಅಭಿಯಂತರರು ಶ್ರೀ ವಿನಾಯಕ ನಾಯಕ್ ರವರು ಮಾತನಾಡಿ ಸದರಿ ಫ್ಲೈಓವರ್ ಕಾಮಗಾರಿಯು 2022ನೇ ಇಸವಿಯಲ್ಲಿ ಪೂರ್ಣಗೊಳ್ಳುವುದಾಗಿ ತಿಳಿಸಿದರು.

ಶ್ರೀ ಸಂಪಂಗಿರಾಜು ರವರು ಮಾತನಾಡಿ, ವೈಯಕ್ತಿಕ ವಸತಿ ಯೋಜನೆಯಡಿಯಲ್ಲಿ ಕೈಗೊಳ್ಳುವ ಒಂಟಿಮನೆ ಬಿಲ್ಲು ಪಾವತಿಸುವ ಕ್ರಮವು ತುಂಬಾ ನಿಧಾನಗತಿಯಾಗುತ್ತಿದ್ದು, ಇದರ ಬಗ್ಗೆ ಆಯುಕ್ತರು, ಬಿ.ಬಿ.ಎಂ.ಪಿ. ರವರಿಗೆ ಪತ್ರ ಬರೆಯಲು ತಿಳಿಸಿದರು.

4ನೇ ಅಡ್ಡರಸ್ತೆ, 18ನೇ ಮುಖ್ಯರಸ್ತೆ ಜಂಕ್ಷನ್ ಬಳಿ ಮರವು ವಿದ್ಯುತ್ ಕಂಬವನ್ನು ಸ್ಪರ್ಶಿಸುತ್ತಿರುತ್ತದೆ. ಕೂಡಲೇ ಮರದ ರೆಂಬೆಯನ್ನು ಕತ್ತರಿಸುವಂತೆ ತಿಳಿಸಿದರು.

ಶ್ರೀ ಜಯರಾಮು ಮಾತನಾಡಿ, ರಸ್ತೆಯಲ್ಲಿ ಕಸವನ್ನು ತೆರವುಗೊಳಿಸಲು ತಳ್ಳುವ ಗಾಡಿಗಳು (Push Carts) ಕಾರ್ಯನಿರ್ವಹಿಸುತ್ತಿಲ್ಲ ಎಂದು ತಿಳಿಸಿದರು. ಈ ವಿಷಯವಾಗಿ ಶ್ರೀ ಪ್ರಸಾದ್, ಆರೋಗ್ಯ ಪರಿವೀಕ್ಷಕರು ಮಾತನಾಡಿ ತಳ್ಳುವ ಗಾಡಿಗಳು (Push Carts) ಬದಲಾಗಿ Jumboo Bags ಗಳನ್ನು ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಅನುಷ್ಠಾನಕ್ಕೆ ತಂದು ಮತ್ತು ಮುಂದಿನ ವಾರ್ಡ್ ಸಭೆಯಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಗುವುದು ಎಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಚಂದ್ರಶೇಖರ್ .ಪಿ)
ಸದಸ್ಯ ಕಾರ್ಯದರ್ಶಿ
ಹಾಗೂ ಕಿರಿಯ ಅಭಿಯಂತರರು,
ವಾರ್ಡ್-151 ಕೋರಮಂಗಲ

(ಶ್ರೀ ಪಿ. ವನರಾಜ)
ಸಹಾಯಕ ಕಾರ್ಯಪಾಲಕ ಅಭಿಯಂತರರು
(ಕೋರಮಂಗಲ) ಮತ್ತು ನೋಡಲ್ ಅಧಿಕಾರಿಗಳು
ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು

**ಪ್ರತಿಯನ್ನು:**

1. ಕೇಂದ್ರ ಕಛೇರಿಯ bbmp198wardcommitte@gmail.com ಇ-ಮೇಲ್ ಮುಖಾಂತರ ಸಲ್ಲಿಸುತ್ತಾ ಬೃ.ಬೆಂ.ಮ.ಪಾಯ ಅಂತರ್ಜಾಲದಲ್ಲಿ ಪ್ರಕಟಿಸಲು ಈ ಮೂಲಕ ಕೋರಲಾಗಿದೆ.
2. ಕಛೇರಿ ಕಡತಕ್ಕೆ.




Scanned with CamScanner

Date :- 21-11-2020
Day :- Saturday

Ward Committee Meeting Ward 151 Kormangala





Scanned with CamScanner

Ward Committee Meeting
Ward 151 Koramangala

Date: 21-11-2020
Day: Saturday

| Sl No | Name | Signature |
|---|---|---|
| 1 | M Chandrappa | [signature] |
| 2 | Padmavathi Kalaram | |
| 3 | M A Abbas | |
| 4 | K N Chandrashekar | |
| 5 | Vishwanath Kashyap | Vishwanath Kashyap |
| 6 | G M Shetty | |
| 7 | Dr.K. Umeshwara | [signature] |
| 8 | Jayaramu | Jayaram 93412-26213 |
| 9 | Neerajashetty | Neeraja |
| 10 | M. Srinivasa | [signature] |
| 11 | M Sampangi Raju | M.SAMPANGI Raju 8277461133 |
| 12 | Panjan. A | |
| 13 | P Chandrashekar [JE 151] | [signature] 21/11/2020 |
| 14 | P. Vanaraj [Nodal officer] | |



| Sl No | Name | Department | Signature |
|---|---|---|---|
| 1. | Md. Shadab Haider (SrHI) | BBMP(SrHI) | Mohd Shadab |
| 2. | Vinayak Naik (A.E) | BBMP(Projects) | [signature] 8904868741 |
| 3 | Upendra H.V | BBMP[[illegible]] | 8558258562 [signature] |
| 4. | MOHAN KUMAR. G. PSI Adugodi ~~Traffic P.~~ | PSI Adugodi T.P. | [signature] 9480[illegible] |
| 5. | DEVARAJU. ASI. Madivala police Station | police madivala ps. | [signature] 9972106146 |
| 6. | PRASAD N. S. Sr. Hlth Inspector | SHI Koramangala | [signature] 8[illegible]41501 |

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ ವಾರ್ಡ್ ಸಮಿತಿ/ ಕಿರಿಯ ಅಭಿಯಂತರರು ರವರ ಕಛೇರಿ, ಕೋರಮಂಗಲ ವಾರ್ಡ್ 151,
ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ,5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು

ದಿನಾಂಕ:17.11.2020

ರವರಿಗೆ,

ಶ್ರೀ ಎಂ. ಚಂದ್ರಪ್ಪ,
ವಾರ್ಡ್ ಸಮಿತಿ ಸದಸ್ಯರು (ಮಾಜಿ ಸದಸ್ಯರು),
ವಾರ್ಡ್ 151 ಕೋರಮಂಗಲ,
ಬೆಂಗಳೂರು.

ಮಾನ್ಯರೇ,

ವಿಷಯ :- ದಿನಾಂಕ:21-11-2020 ರಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಚೇರಿ ಆದೇಶದ ಪತ್ರ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ:21-09-2020.

* * * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೋರಮಂಗಲ ವಾರ್ಡ್ ಸಂಖ್ಯೆ.151ರ ವಾರ್ಡ್ ಸಮಿತಿಯ ಸಭೆಯನ್ನು ಶ್ರೀ ಎ. ಸಿದ್ದಪ್ಪಾಜಿ, ಉಪ ಆರೋಗ್ಯಾಧಿಕಾರಿ (ಪೂರ್ವ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ರವರ ಅಪ್ಪಣೆ ಮೇರೆಗೆ ದಿನಾಂಕ:21-11-2020ನೇ ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಈ ವಾರ್ಡ್ ಸಮಿತಿಯ ಸಭೆಯನ್ನು ಬಿ.ಬಿ.ಎಂ.ಪಿ. ಉದ್ಯಾನವನ, **12ನೇ ಮುಖ್ಯರಸ್ತೆ, 3ನೇ ಬ್ಲಾಕ್ ಕೋರಮಂಗಲ, ಪೋಸ್ಟ್ ಆಫೀಸ್ ಹತ್ತಿರ, ವಾರ್ಡ್ 151, ಬೆಂಗಳೂರು** ರಲ್ಲಿ ನಡೆಸಲು ಏರ್ಪಡಿಸಲಾಗಿದೆ. ಆದ ಪ್ರಯುಕ್ತ ವಾರ್ಡ್ ಸಮಿತಿಯ ಎಲ್ಲಾ ಮಾನ್ಯ ಸದಸ್ಯರುಗಳು ಹಾಗೂ ಕೆಳಕಂಡ ಅಧಿಕಾರಿ/ನೌಕರರ ವರ್ಗದವರು ದಯವಿಟ್ಟು ಸಭೆಗೆ ತಪ್ಪದೆ ಹಾಜರಾಗಿ, ವಾರ್ಡ್ ಅಭಿವೃದ್ಧಿ ಹಾಗೂ ಕುಂದು ಕೊರತೆಗಳ ಬಗ್ಗೆ ಮುಕ್ತವಾಗಿ ಚರ್ಚಿಸಿ, ಅಮೂಲ್ಯ ಸಲಹೆ ಸೂಚನೆಗಲನ್ನು ನೀಡಲು ಕೋರಿದೆ. ಅಧಿಕಾರಿ/ನೌಕರರು ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಮಾಹಿತಿಗಳೊಂದಿಗೆ ಹಾಜರಾಗಲು ಕೋರಿದೆ.

ಸಭೆಯಲ್ಲಿ ಚರ್ಚಿಸತಕ್ಕ ವಿಷಯ: 1) ವಾರ್ಡಿನ ಘನತ್ಯಾಜ್ಯಗಳಿಗೆ ಸಂಬಂಧಿಸಿದ ವಿಷಯಗಳು 2) ವಾರ್ಡಿನಲ್ಲಿ ಕೋವಿಡ್-19 ಗೆ ಸಂಬಂಧಿಸಿದ ವಿಷಯಗಳು 3) ವಾರ್ಡಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ 4) ವಾರ್ಡಿನಲ್ಲಿ ಅನಧಿಕೃತವಾಗಿ ರಸ್ತೆ ಕತ್ತರಿಸಿರುವ ಬಗ್ಗೆ (ಓಎಫ್‌ಸಿ ಅಥವಾ ಬೇರೆ ಇಲಾಖೆಗಳಿಂದ) 5) ಸಾರ್ವಜನಿಕರ ಇತರೆ ಕುಂದು ಕೊರತೆಗಳ ಬಗ್ಗೆ (BWSSB, BESCOM & POLICE) ಹಾಗೂ ತೆರಿಗೆ ವಸೂಲಾತಿಗಳ ಬಗ್ಗೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

[signature]

ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ 151, ಕೋರಮಂಗಲ

Scanned with CamScanner